

ಪತ್ನಿ ಪ್ರೇಮಲತಾ ಅವರೊಂದಿಗೆ ಮೊಗಸಾಲೆ

ಪ್ರಶಸ್ತಿಯ ಪ್ರಾಯೋಜಕರಾಗಿದ್ದಾರೆ. ನೀವು ಹೇಳಿದ ಅನುವಾದ ಪ್ರಕಾರಕ್ಕೆ ಪ್ರಾಯೋಜಕರು ಮುಂದೆ ಬಂದಿಲ್ಲ.

ನಾನು ಅನುವಾದ ಕ್ಷೇತ್ರವನ್ನು ಖಂಡಿತವಾಗಿ ಅವಗಣಿಸುವವನಲ್ಲ. ನನ್ನ ಪ್ರೀತಿಯ ಕಾದಂಬರಿ ಪ್ರಕಾರಕ್ಕೇ ನಮ್ಮಲ್ಲಿ ಪ್ರಶಸ್ತಿಯ ಅವಕಾಶ ಇಲ್ಲ. ಆ ನೋವು, ಯಾರಾದರೂ ಪ್ರಾಯೋಜಕರಿಂದ ನಿವಾರಣೆಯಾದರೆ ಸಂತೋಷ. ಅಂಥ ಪ್ರಾಯೋಜಕರಿದ್ದರೆ ನಾನು ಸ್ವಾಗತಿಸುತ್ತೇನೆ.

◆ **ಹಳ್ಳಿ, ಕೃಷಿ ಮತ್ತು ಸಾಹಿತ್ಯವನ್ನು ಲಾಗಾಯ್ತಿನಿಂದಲೂ ತುಸು ರೊಮಾಂಟಿಸೈಸ್ ಮಾಡುತ್ತಲೇ ಬಂದವರು ನಾವು. ಜೀವಮಾನ ಪೂರ್ತಿ ಹಳ್ಳಿಯಲ್ಲೇ, ಅದರಲ್ಲೂ ಕೃಷಿಯ ಸಂಸರ್ಗದಲ್ಲಿದ್ದುಕೊಂಡೇ, ಸಾಹಿತ್ಯ ರಚನೆ ಮಾಡುತ್ತಾ ಬಂದವರು ನೀವು. ಸಮೀಪದರ್ಶನದಿಂದಾಗಿ ನೀವು ಕಾಣಲು ಸಾಧ್ಯವಾದ ಹಳ್ಳಿಗಳ ಕುರೂಪ, ಕೃಷಿಯ ನೋವಿನ ಮುಖ ಮತ್ತು ಸಾಹಿತ್ಯದ ಅಗೋಚರ ಮುಖವಾಡಗಳ ಬಗ್ಗೆ ತುಸು ಹೇಳಬಹುದೇ?**

ನಾನು ಹುಟ್ಟಿದ್ದು, ಕಾಂತಾವರ ಹೇಗಿದೆಯೋ ಹಾಗೆಯೇ ಇರುವ ಒಂದು ಹಳ್ಳಿಯಲ್ಲಿ. ವೈದ್ಯಕೀಯದ ಓದಿಗಾಗಿ ನಾಲ್ಕೂವರೆ ವರುಷ ಉಡುಪಿಯಲ್ಲಿದ್ದುದನ್ನು ಹೊರತುಪಡಿಸಿದರೆ ಆಮೇಲೆ ಅರೆಸರಕಾರಿ ವೈದ್ಯಾಧಿಕಾರಿಯಾಗಿ ಕಾಂತಾವರಕ್ಕೆ ಬಂದೆ. ಇಲ್ಲೇ ಗೂಟ ಹೊಡೆದ ಹಾಗೆ 57 ವರುಷಗಳಿಂದ ನೆಲೆ ನಿಂತಿದ್ದೇನೆ. ನನ್ನ ಹೆಂಡತಿ ಮಕ್ಕಳಿಗೂ ಹಳ್ಳಿ ಇಷ್ಟವೇ. ನಾನು ಪೇಟೆಗೆ ಹೋಗಿ ನೆಲೆಸುವ ಕನಸು ಕಂಡದ್ದೇ ಇಲ್ಲ. ಹೋಗಿದ್ದರೆ ಪೇಟೆಯ ವಾತಾವರಣದಿಂದ ನಾನು ಇಲ್ಲಿ ಮಾಡಿದಷ್ಟು ಕೆಲಸವನ್ನು ಮಾಡಲು ಸಾಧ್ಯವಾಗುತ್ತಿರಲಿಲ್ಲವೇನೋ ಎಂಬ ಅನಿಸಿಕೆಯೂ ನನಗಿದೆ.

ಕರ್ನಾಟಕ ಸರಕಾರವು ಜಾರಿಗೊಳಿಸಿದ ಭೂಮಸೂದೆ ಬರುವ ತನಕ ಇಲ್ಲೂ ಹಳ್ಳಿಗಳಲ್ಲಿ ವರ್ಗ, ವರ್ಣ ವ್ಯವಸ್ಥೆ, ಪಾಳೆಗಾರಿಕೆ ಮತ್ತು ಸ್ವಲ್ಪ ಅಸ್ಪೃಶ್ಯತೆಯೂ ಇತ್ತು. ಆ ಮಸೂದೆಯಿಂದ ರೈತರು ಎಚ್ಚೆತ್ತುಕೊಂಡರು. ತಮ್ಮ ಹಕ್ಕುಗಳನ್ನು ಅರಿತರು. ಮಕ್ಕಳನ್ನು ಓದಿಸಲು ಮುಂದಾದರು. ಆದರೆ, ಜಾಗತೀಕರಣ ಬಂದ ಮೇಲೆ ಹಳ್ಳಿಯ ರೈತನ ಮೇಲೂ ಅದು ಪರಿಣಾಮ ಉಂಟು ಮಾಡಿತು. ಅವನಲ್ಲಿದ್ದ ಮುಗ್ಧತೆ, ಪ್ರಾಮಾಣಿಕತೆ ಕಡಿಮೆಯಾಯಿತು. 'ಹಣ' ಸಂಪಾದನೆಯೇ ಜೀವನದ ಮುಖ್ಯ ಗುರಿ ಎನ್ನುವುದೂ ಅವನದ್ದಾಯಿತು. ಕೃಷಿ ಸಂಸ್ಕೃತಿಯ ಮೇಲೆ ಆಸಕ್ತಿ ಕಡಿಮೆಯಾದದ್ದಷ್ಟೇ ಅಲ್ಲ. ಅದರ ಬಗ್ಗೆ ಒಂದು ರೀತಿಯ 'ಕೀಳರಿಮೆ'ಯೂ